ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ವಿಭಾಗ
ಜಿ.ಕೆ.ವಿ.ಕೆ., ಬೆಂಗಳೂರು-560065
* ಸಮಗ್ರ ಕೃಷಿ ಹವಾಮಾನ ವರದಿ ಪತ್ರಿಕೆ *

ದಿನಾಂಕ: 19-08-2014

ಕೋಲಾರ ಜಿಲ್ಲೆಗೆ ಸೀಮಿತವಾಗಿದೆ

ಈ ವಾರದ ಮುನ್ಸೂಚನೆ (ದಿನಾಂಕ 20.8.14 –24.8.14 ವರೆಗೆ)

	20.08.14	21.08.14	22.08.14	23.08.14	24.08.14
ಮಳೆ (ಮಿ ಮಿ)	18	18	13	19	7
ಗರಿಷ್ಠ ಉಷ್ಣಾಂಶ(ಡಿ.ಸೆ.)	32	31	32	30	30
ಕನಿಷ್ಠ ಉಷ್ಣಾಂಶ (ಡಿ.ಸೆ.)	22	22	22	22	22
ಮೋಡ (ಪ್ರಮಾಣ)	6	7	5	6	5
ಅರ್ದ್ರತೆ ೭.೨೦ ಬೆ (ಶೇ)	80	81	81	80	80
ಅರ್ದ್ರತೆ ೨.೨೦ ಮ (ಶೇ)	61	64	63	66	58
ಗಾಳಿಯ ವೇಗ (ಕಿ.ಮಿ/ಗಂಟೆಗೆ)	4	3	3	4	4
ಗಾಳಿಯ ದಿಕ್ಕು (ಡಿಗ್ರಿ)	285	290	290	280	235

ಈ ವಾರದ ಮುನ್ಸೂಚನೆಯ ಪ್ರಕಾರ ಮುಂದಿನ ಐದು ದಿನಗಳಲ್ಲಿ ಮೋಡಕವಿದ ವಾತವರಣವಿದ್ದು ಸಂಜೆ ಅಥವಾ ರಾತ್ರಿ ವೇಳೆ ಹಗುರದಿಂದ ಸಾದಾರಣ ಮಳೆಯಾಗುವ ಸಂಭವವಿದೆ. ದಿನದ ಗರಿಷ್ಠ ಉಷ್ಣಾಂಶ 30.0-32.0^{o}C ಮತ್ತು ಕನಿಷ್ಠ 22.0 ^{o}C ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ 80-81 % ಇದ್ದು, ಮಧ್ಯಾಹ್ನ 58-66 % ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 3-4 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

ಸಾಮಾನ್ಯ ಸೂಚನೆಗಳು:

- ಭೂಮಿಯಲ್ಲಿ ಸಾಕಷ್ಟು ತೇವಾಂಶದ ಹದವರಿತು ರಾಗಿ ತಳಿಗಳಾದ ಇಂಡಾಫ್-5 ಮತ್ತು ಪಿ.ಆರ್-202, ಜಿ.ಪಿ.ಯು-26,45,48 ಹೆಕ್ಟೇರಿಗೆ-5 ಕೆಜಿಯಂತೆ ಸಾಲಿನಿಂದ ಸಾಲಿಗೆ 25 ಸೆ.ಮೀಟರ್ ಮತ್ತು ಬೀಜದಿಂದ ಬೀಜಕ್ಕೆ 10 ಸೆ.ಮೀಟರ್ ಇರುವಂತೆ ಶಿಫಾರಿಸಲ್ಪಟ್ಟ ರಾಸಾಯನಿಕ ಗೊಬ್ಬರ ಮಣ್ಣಿಗೆ ಸೇರಿಸಿ ಬಿತ್ತನೆ ಮಾಡುವುದು
- ವಿವಿಧ ಹಂತಗಳ ಸಸಿಮಡಿಗಳನ್ನು ತಯಾರಿಸಿಕೊಳ್ಳಬೇಕು ಮತ್ತು ರಾಗಿ ಬೆಳೆಗಳಲ್ಲಿ ಕಳೆಯನ್ನು ತೆಗೆಯುವುದು ಮತ್ತು ಅಚಿತರ ಬೇಸಾಯ ಮಾಡುವುದು ಸೂಕ್ತ.
- ತೊಗರಿ ಬೆಳೆಯಲ್ಲಿ ಕಳೆಯನ್ನು ತೆಗೆದು ಅಂತರ ಬೇಸಾಯ ಮಾಡುವುದು.
- ಹೊಲದ ಬದುವು ಮತ್ತು ನೀರು ತಡೆ ಒಡ್ಡುಗಳ ರಿಪೇರಿ ಕೆಲಸವನ್ನು ಕೈಕೊಳ್ಳಬೇಕು
- ಬಿತ್ತನೆಗೆ ಬೇಕಾದ ಉತ್ತಮ ಗುಣಮಟ್ಟದ ಬೀಜಗಳನ್ನು ಹತ್ತಿರದ ರೈತ ಸಂಪರ್ಕ ಕೇಂದ್ರ, ಕೃಷಿ ವಿಶ್ವವಿದ್ಯಾನಿಲಯ ಅಥವಾ ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಖರೀದಿಸಲು ಸೂಚಿಸಲಾಗಿದೆ.
  ಅಲಸಂದೆ : C-152 ಮತ್ತು TVX-944
  ಅವರೆ: HA-1 ಮತ್ತು HA-2
- ತೋಟಗಾರಿಕಾ ಬೆಳೆಗಳಾದ ತೆಂಗು, ಸಪ್ಪೋಟ, ಸೀಬೆಹಣ್ಣು ಮತ್ತು ಮಾವಿನ ಸಸಿಗಳನ್ನು ನಾಟಿಮಾಡುವುದು ಮತ್ತು ಹಳೆತೋಟಗಳ ಮದ್ಯೆ ಅಂತರ್ ಬೇಸಾಯ ಮಾಡುವುದು ಮತ್ತು ಗಾಳಿಯ ವೇಗವು ಹೆಚ್ಚಾಗಿರುವುದರಿಂದ ಹೊಸದಾಗಿ ಪ್ರಾರಂಭಿಸಿರುವ ತೋಟಗಳಲ್ಲಿ ಗಿಡಗಳು ನೆಲಕ್ಕೆ ಬೀಳದಂತೆ ಕಟ್ಟುವುದು.
- ಜಾನುವಾರು, ರೇಷ್ಮೆ ಹಾಗೂ ಕೋಳಿ ಸಾಕಣೆ ಕೊಠಡಿಯ ಉಷ್ಣಾಂಶದ ಸ್ಥಿರತೆಯನ್ನು ಕಾಪಾಡಿಕೊಳ್ಳುವುದು.
- ಜಾನುವಾರುಗಳಿಗೆ ಕಾಲುಬಾಯಿ ಜ್ವರಕ್ಕೆ ಲಸಿಕೆಯನ್ನು ಹಾಕಿಸುವುದು ಸೂಕ್ತ.

ತಾಂತ್ರಿಕ ಅಧಿಕಾರಿ :
ನಾಗೇಶ್.ಎಲ್
ಕೃ.ವಿ.ವಿ, ಬೆಂಗಳೂರು.

ನೋಡಲ್ ಅಧಿಕಾರಿ :
ಡಾ.ಎನ್.ಎ.ಜನಾರ್ಧನ ಗೌಡ
ಕೃ.ವಿ.ವಿ, ಬೆಂಗಳೂರು.